**ಅಸಲು ದಾವಾ ಸಂಖ್ಯೆ: 817/2019**

**ಪಿಡಬ್ಲೂ-1**

**ದಿಃ 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ. SGK ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಸಂಬಂಧಿಸಿದ 2019-20 ನೇ ಸಾಲಿನ ಪಹಣಿ ಪತ್ರಿಕೆ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು, (10 ಪುಟಗಳು)

ದಾವಾ ಸ್ವತ್ತಿಗೆ ಸಂಬಂಧಿಸಿದ 5 ಛಾಯಾ ಚಿತ್ರಗಳು ಮತ್ತು ಸಿ.ಡಿ ಹಾಗೂ ರಶೀದಿ ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-2 ರಿಂದ 8 ಎಂದು,

ನನ್ನ ಅಜ್ಜ ಮೇಗೋ ನಾಗೋ ಕಿತ್ತೂರ ಹಾಗೂ ನನ್ನ ತಂದೆ ಲಕ್ಷ್ಮಣ ಮೇಗೋ ಕಿತ್ತೂರ ರವರ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-9 ಮತ್ತು 10 ಎಂದು,

ಭೂ ನ್ಯಾಯ ಮಂಡಳಿಗೆ ಮೇಗೋ ನಾಗೋ ಕಿತ್ತೂರ ರವರು ದಾವಾ ಸ್ವತ್ತಿನ ಮಂಜೂರಾತಿಗೆ ಸಲಿಸಿದ ನಮೂನೆ-7 ರ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-11 ಎಂದು,

ದಿಃ 20-08-1976 ರಂದು ಭೂ ನ್ಯಾಯಮಂಡಳಿ ಬೆಳಗಾವಿ ಹೊರಡಿಸಿದ ಆದೇಶದ ದೃಡೀಕೃತ ನಕಲು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-12 ಎಂದು,

ಮೇಗೋ ನಾಗೋ ಕಿತ್ತೂರ ರವರ ಹೆಸರಿಗೆ ದಾವಾ ಸ್ವತ್ತಿನ occupancy rights ಮಂಜೂರು ಮಾಡಿ ತಹಶೀಲ್ದಾರ ರವರು ನೀಡಿದ ನಮೂನೆ-10 ರ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-13 ಎಂದು,

ದಾವಾ ಸ್ವತ್ತಿನ ಕುರಿತು ಇರುವ ಮ್ಯುಟೇಶನ ಡೈರಿಯ ದೃಡೀಕೃತ ನಕಲಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-14 ಮತ್ತು 15 ಎಂದು,

ಸದರಿ ದಾಖಲೆಗಳು ಮರಾಠಿ ಭಾಷೆಯಲ್ಲಿ ಇದ್ದು, ಅವುಗಳ ಆಂಗ್ಲ ಭಾಷೆಯ ತರ್ಜುಮೆ ಪ್ರತಿಗಳನ್ನು ನಿಪಿ-14(ಎ) ಮತ್ತು 15(ಎ) ಎಂದು, ಗುರುತಿಸಲಾಯಿತು.

**ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶವನ್ನು ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**